ಎದುರು ಒಂದೇ ಒಂದು ಕಂಡೀಷನ್ ಇಟ್ಟಿದ್ದಳು. ಅಂತೆಯೇ ಕಾದು, ಕುಲದೇವರಾಗಿ ನರಸಿಂಹ ದೇವರಾಗಿರುವವನನ್ನೇ ಮದುವೆಯಾದಳು. ದೇವರೇ ಅಂತ ಕೈ ಮುಗಿಯುವಾಗ ಕಣ್ಣಮುಂದೆ ನಾವು ಚಿಕ್ಕಂದಿನಿಂದ ನಮಸ್ಕರಿಸಿಕೊಂಡು ಬಂದ ದೇವರು ಬದಲಾಗುವುದಿಲ್ಲ. ಎಂದ ಮೇಲೆ ಸೇರಿದ ದೇವರಿಗೆ ನಾವು ದ್ರೋಹ ಬಗೆಯುವುದೇ! ಎಂದು ನಗೆಯಾಡಿದಳು. ಬದಲಾದ ಕಾಲಕ್ಕೆ ತಕ್ಕ ಬದಲಾದ ಪೀಳಿಗೆಯ ಈ ಕಾಲಾಂತರದ ಪರಿವರ್ತನೆಯ ಅಂದಾಜಿನಲ್ಲಿ ಮತ್ತೊಮ್ಮೆ ಆ ಸಾಲನ್ನು ಮೆಲುಕಬೇಕಾಯಿತು.

''ಮಗ ಅಂತರ್ಜಾತೀಯ ಮದುವೆ ಮಾಡಿಕೊಂಡ. 'ಏನೇ ಆಗಲಿ, ಅಂತರ್ಮತ ಅಲ್ಲ ತಾನೆ? ಅಷ್ಟಿದ್ದರೆ ಸಾಕು ಮಾರಾಯಾ, ಮುಂದರಿ' ಎಂದೆವು. ಮತವೇ ಬೇರೆ ಆಗಿ, ಅದಕ್ಕೆ ತಕ್ಕಂತೆ ಸಾರಾಸಗಟು ನಮ್ಮ ದೇವರುಗಳೇ ಬದಲಾಗಿ ಬಿಡುವುದು ಯಾರಿಗೂ ಬೇಡ. ಅಯ್ಯಮ್ಮ'' ಎಂದ ಗೆಳತಿಯ ಮಾತುಗಳನ್ನು ಕೇಳಿದ ಲಾಗಾಯ್ತಿನಿಂದಂತೂ ಬದಲಾಗುವ ದೇವರುಗಳು ಮತ್ತು ಬದಲಾದಂತೆ ಕಾಣುವ ದೇವರುಗಳು ಕಣ್ಮುಂದೆ ಬರುತ್ತಿದ್ದಾರೆ. ಇದು ಎಲ್ಲ ಮತಗಳಿಗೂ ಸಂಬಂಧಪಟ್ಟಂತೆ ವ್ಯಕ್ತಿಯ ಅಂತರಂಗದಲ್ಲಿ ನಡೆಯುವ ಸಾಮಾನ್ಯ ವಿದ್ಯಮಾನವಷ್ಟೆ?

ಬೇರೆ ಮತದವನೊಂದಿಗೆ ವಿವಾಹವಾಗಿ ವರನ ಮತಕ್ಕೆ ತನ್ನನ್ನು ಬದಲಾಯಿಸಿಕೊಂಡೂ ಪೆಟ್ಟಿಗೆಯಲ್ಲಿ ತನ್ನ ಮೂಲಮತದ ಪಟ ಇಟ್ಟುಕೊಂಡು ಬೆಳಗಾಗೆದ್ದು ಕೈಮುಗಿಯುವ ಕಲಾವಿದೆಯೊಬ್ಬಳು 'ದೇವರುಗಳು ಹೊರಗಿಂದ ಬದಲಾಗಬಹುದು. ಒಳಗಿಂದ ಅಲ್ಲವೆ. ಕಷ್ಟ ಬಂದಾಗ ದುಃಖವಾದಾಗ ನಾವು ಒಳಾಂತರದಲ್ಲಿ ಕೈಮುಗಿಯುವುದು ಬಾಲ್ಯದಿಂದಲೂ ನಾವ್‌ನಾವು ನಂಬಿ ಬಂದ ದೈವಕ್ಕೇ. ಉಳಿದದ್ದೆಲ್ಲವೂ, ನಮ್ಮ ಜೀವನ ಸರಾಗವಾಗಿ ನಡೆಯಲು ಮಾಡಿಕೊಂಡ ಬಾಹ್ಯ ಒಪ್ಪಂದಗಳು' ಎನ್ನುವಳು. ಎಂತಲೇ ಕಣ್ರೆಪ್ಪೆ ತೋಯಿಸುವ ಹೆತ್ತಕರುಳು ಕಲಕಿ ಹೋಗುವಂಥ ವಿಸೀ ಕವನದ ಕೆಲಸಾಲುಗಳನ್ನು ನೆನೆಯುತ್ತಲೇ, ಒಳದನಿಯ ಕೆಲ ಪ್ರಶ್ನೆಗಳೊಂದಿಗೆ ನಸುನಗೆಯೊಂದಿಗೆ ಕವಿಯೊಡನೆ ಕೆಲವಿವರಣೆ ಕೇಳುವ ಮತ್ತು ವಿನಯ ಕಳೆಯದೆ ಸೈಸವಾಲು ಮಾಡುವ ಹಂಬಲ ಹುಟ್ಟಿಕೊಂಡಿದೆ.

ನಾವು ಬಿಟ್ಟರೂ ದೈವ ದೇವರು ನಮ್ಮನ್ನು ಬಿಡದಿರುವ, 'ಕೈ ಹಿಡಿದು ನಡೆಸೆನ್ನನು' ಎಂದು ನಾವು ಆರ್ತತೆಯಿಂದ ಶರಣಾಗುವ, ಅಂತರ್ಯದಲ್ಲಿ ಮನೆಮಾಡಿದ ದೇವರನ್ನು ಕುರಿತು ಏನೆನ್ನುತ್ತೀರಿ ಎಂದು ಕವಿ ಇದ್ದಿದ್ದರೆ ನೇರ ಕೇಳುತ್ತಿದ್ದೆ. ನಿಮ್ಮ ಸಾಲನ್ನು ಹೇಗೆ ಏನು ತುಸು ವಿವರಿಸುವಿರಾ? –ಎಂದು ಕೋರುತ್ತಿದ್ದೆ. ಕೇಳುತ್ತಿದ್ದೆನೋ ಕೋರುತ್ತಿದ್ದೆನೋ ವಾದಿಸುತ್ತಿದ್ದೆನೋ, ಆ ಮಹಾನುಭಾವರು ಉತ್ತರಿಸದೆ, ಮುಗುಳು ನಗುತ್ತ ಆಲಿಸುತ್ತಿದ್ದರೋ... 'ನಾನು ಹಳೆಯ ಕಾಲದವನಪ್ಪಾ' ಎನ್ನುತ್ತಲೇ, ಯಾವೊಂದು ಕಾಲದಲ್ಲಿ ಜನ್ಮತಳೆದ ಇವತ್ತಿಗೂ ಜನಜಿಹ್ವೆಯಲ್ಲಿ ಬದುಕಿಕೊಂಡೇ ಇರುವ ಕಾವ್ಯವೊಂದನ್ನು ಬದಲಾದ ಕಾಲದ ಕನ್ನಡಿಯಲ್ಲಿ ವ್ಯರ್ಥ ಸೀಳಹೋಗದೆ, ಹೊಸಜೀವಂತಿಕೆಯಲ್ಲಿ ಇಡಿಯಾಗಿ ಒಟ್ಟಾಗಿ ಸವಿಯುವ ಬಗೆ ಹೇಗೆ ಎಂದು ವಿವರಿಸುತ್ತಿದ್ದರೋ.

ಯಾವುದಕ್ಕೂ ನಮ್ಮ ಆ ಪ್ರೀತಿಯ ಕವಿಯೇ ಕಾಣಸಿಗಲ್ಲವೆ!

ಅವತ್ತು ನಮ್ಮ ಕಾಲೇಜಿಗೆ ವಿಸೀಯವರು ಬಂದದ್ದು, ಕಾರಿಡಾರಿನುದ್ದಕ್ಕೂ ನಡೆದು ಬರುತ್ತ ಸಾವಧಾನವಾಗಿ ವೇದಿಕೆ ಏರಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತಾಡಿದ್ದು, ಪಕ್ವತೆಯೇ ರೂಪತಾಳಿ ಬಂದಂತೆ ನಮಗೆ ಕಂಡದ್ದು ಇದರೊಂದಿಗೆ ನೆನಪಾಗುತ್ತಿದೆ. ಬಾಲ್ಯದಲ್ಲೇ ನನ್ನ ಒಳಹೊಕ್ಕ ಹಾಡಿನ ಕರ್ತೃವನ್ನುಪ್ರತ್ಯಕ್ಷಕಾಣುವಅಂದಿನಆಪುಲಕ-ಏನೆನ್ನಲಿ! ಅವರನ್ನುನಾನುಕಂಡದ್ದುಅದೇಪ್ರಥಮ,ಅದೇ ಕೊನೆ. ಅವತ್ತು ವಿದ್ಯಾರ್ಥಿನಿಯೊಬ್ಬಳು 'ಕಾದಿರುವಳು ಶಬರೀ ಶ್ರೀರಾಮ ಬರುವನೆಂದು' ಹಾಡುವಾಗ ಒಂದು ಲೆಕ್ಕದಲ್ಲಿ ಅವರು ಬರುವ ರೋಮಾಂಚದಲ್ಲಿ ಕಾದುಕುಳಿತ ವಿದ್ಯಾರ್ಥಿ ಸಮೂಹವನ್ನು ರೂಪಕದಲ್ಲಿ ಹಿಡಿದಂತೆನಿಸಿ, ಅಚ್ಚರಿಯಿಂದ ಪರಸ್ಪರ ಪಿಸುವಾಗಿದ್ದು ಎಲ್ಲ ನೆನಪಿನಲ್ಲಿ ತಂಗಿದೆ.

●